ಮಣ್ಣಿಗೆ ಸಾರಜನಕವನ್ನು ಸೇರಿಸಬಲ್ಲ ಡಯಂಚ, ಸೆಣಬು, ಉದ್ದು ಇತ್ಯಾದಿಗಳನ್ನು ಮರಗಳ ಬುಡದಲ್ಲಿ ಬೆಳಿತೀವಿ. ಇದೇ ಮಣ್ಣನ್ನು ನೀರಲ್ಲಿ ಕದಡಿ ಅದರ ಕಷಾಯವನ್ನು ಗರಿಗಳಿಗೆ ಸಿಂಚನ ಮಾಡ್ತೀವಿ. ಇಷ್ಟು ಸಾಕು ಇವಕ್ಕೆ.

◆ **ನಿಮ್ಮ ಈಗಿನ ಯಶಸ್ಸಿನ ಆಧಾರದಲ್ಲಿ ತೋಟದ ವಿಸ್ತರಣೆಯ ಯೋಜನೆ ಇದೆಯೆ? ಬೇರೆ ಕಡೆ ಹೊಸ ಖರ್ಜೂರದ ತೋಟ ಬೆಳೆಸುತ್ತೀರಾ?**

ಇಲ್ಲ ಇಲ್ಲ; ಇಷ್ಟು ಸಾಕು. ಆಸೆಗೆ ನಾನೇ ಮಿತಿ ಹಾಕಿಕೊಂಡಿದ್ದೇನೆ. ಮೇಲಾಗಿ ನಾನು ಪೂರ್ಣಾವಧಿ ಕೃಷಿಕ ಆಗಲು ತಯಾರಿಲ್ಲ. ಹೊಸ ತಲೆನೋವನ್ನಲ್ಲ, ಸುಸ್ಥಿರ ಕೃಷಿಯತ್ತ ಹೊಸ ತಲೆಮಾರನ್ನು ಸೃಷ್ಟಿಸುವತ್ತ ಗಮನ ಹೆಚ್ಚಿಗೆ ಇದೆ.

◆ **ನಿಮ್ಮ ಯಶಸ್ಸನ್ನು ನೋಡಿ ಇತರರು ಖರ್ಜೂರ ಬೆಳೆಯಲು ಆಸಕ್ತಿ ತೋರಿದ್ದಾರೆಯೆ?**

ಹೌದು. ಇಲ್ಲೇ ಸಮೀಪದಲ್ಲಿ ಒಂದಿಬ್ಬರು 20–70 ಎಕರೆಗಳಷ್ಟು ದೊಡ್ಡ ತೋಟಗಳನ್ನು ಸೃಷ್ಟಿಸುತ್ತಿದ್ದಾರೆ. ಅಲ್ಲೂ ಫಸಲು ಬರಲು ಆರಂಭವಾಗಿದೆಯಂತೆ. ಬರಲಿ, ಎಷ್ಟಿದ್ದರೂ ಖರ್ಜೂರಕ್ಕೆ ಬೇಡಿಕೆ ಇದ್ದೇ ಇರುತ್ತದೆ.

◆ **ಮಾರುಕಟ್ಟೆ ಹೇಗೆ?**

ಮಧ್ಯವರ್ತಿಗಳಿಗೆ ಕೊಟ್ಟರೆ, ಅವರು ನಮಗೆ ಕಿಲೋಗೆ ನೂರು ರೂಪಾಯಿ ಕೊಟ್ಟು ಬೆಂಗಳೂರಿನ ಮಾಲ್‌ಗಳಲ್ಲಿ 350ಕ್ಕೆ ಮಾರ್ಕೋತಾರೆ. ನಾನು ಪರಿಚಿತರ ಮೂಲಕವೇ ನೇರ 350ರಂತೆ ಮಾರುತ್ತಿದ್ದೇನೆ. ಮೊದಲ ಐದಾರು ಕೊಯ್ಲಿನ ಫಲವೆಲ್ಲ ಆರಂಭದ ಹೂಡಿಕೆಯನ್ನು ಹಿಂದಕ್ಕೆ ಪಡೀಲಿಕ್ಕೇ ಹೋಯ್ತು. ಈಗ ಈ ಮರಗಳು ನನ್ನ ಕೈಹಿಡಿದು ಎತ್ತಿವೆ.

◆ **ಬರಪೀಡಿತ ಎಲ್ಲ ಜಿಲ್ಲೆಗಳಲ್ಲೂ ಇದನ್ನು ಬೆಳೀಬಹುದೆ?**

ಎಲ್ಲೇ ಬೆಳೆದರೂ ರಿಸ್ಕ್ ಇದ್ದೇ ಇರ್ತದೆ. ವಾತಾವರಣ ಹಠಾತ್ ಬದಲಾಗ್ತಾ ಇದೆ. ಬರಪೀಡಿತ ಜಿಲ್ಲೆಗಳಲ್ಲೂ ಹೂಕಚ್ಚುವ ದಿನಗಳಲ್ಲಿ ಜಾಸ್ತಿ ಚಳಿ ಬಿದ್ದರೆ ಅಥವಾ ಕಾಯಿಗಳು ಹಠಾತ್ ಮಳೆಗೆ ಸಿಕ್ಕರೆ ಫಸಲು ಕೈಗೆ ಸಿಗೋದಿಲ್ಲ. ಶಿಲೀಂಧ್ರರೋಗ, ವೈರಾಣುಗಳು ಎಂದಾದರೂ ದಾಳಿ ಮಾಡಬಹುದು. ಕೆಂಪುತಲೆ ಕಂಬಳಿ ಹುಳು ಕಾಟದಿಂದ ನಾನೇ ಹತ್ತಾರು ಮರಗಳನ್ನು ಕಳಕೊಂಡಿದೀನಿ. ಹುಳು ಎಲ್ಲಿ ಅಡಗಿರ್ತದೆ ಅಂತ ಗೊತ್ತೇ ಆಗೋದಿಲ್ಲ.

◆ **ನೀವು ಹಣ್ಣಿನ ಕೊಯ್ಲೋತ್ತರ ಸಂಸ್ಕರಣೆ ಮಾಡುತ್ತಿಲ್ಲವೆ? ಹಣ್ಣಿನ ಜಾಮ್, ವೈನ್, ಒಣ ಖರ್ಜೂರ ಇತ್ಯಾದಿ?**

ಹಣ್ಣನ್ನು ಒಣಗಿಸೋಕೆ ಅಂತ ಸೋಲಾರ್ ಡ್ರಯರ್ ಇಟ್ಟಿದೀವಿ. ಈ ಹಣ್ಣುಗಳನ್ನು ಹಾಗೇ ಇಟ್ಟರೂ ತುಸು ಕಂದುಬಣ್ಣಕ್ಕೆ ತಿರುಗುತ್ತದೆ ವಿನಾ ಕೊಳೆತು ಹಾಳಾಗುವುದಿಲ್ಲ. ಬದಲಿಗೆ ಸಿಹಿ ಇನ್ನೂ ಹೆಚ್ಚುತ್ತದೆ. ತಾಜಾ ಹಣ್ಣಿಗೇ ಬೇಡಿಕೆ ಬೇಕಾದಷ್ಟಿದೆ; ಇತರ ಉಪ ಉತ್ಪನ್ನಗಳನ್ನು ಮಾಡುವ, ಮಾರುವ ಅಗತ್ಯ ನನಗಿಲ್ಲ.

◆ **ಈ ಮರಗಳು ಎಣ್ಣೆ ತಾಳೆಯ ಮರಗಳಂತೇ ಕಾಣುತ್ತವೆ. ಮಸ್ಕಾಟ್‌ನಲ್ಲಿ ಖರ್ಜೂರದ ಬೀಜಗಳಿಂದಲೂ ಎಣ್ಣೆ ತೆಗೆದು ಅಡುಗೆಗೆ, ಸೌಂದರ್ಯ ವರ್ಧನೆಗೆ ಬಳಸುತ್ತಾರೆ. ನೀವು ಅಂಥ ಎಣ್ಣೆ ತೆಗೆಯುವ ಯತ್ನ ಮಾಡಿಲ್ಲವೆ?**

ಈ ಐದು ಟನ್ ಫಸಲಿನಲ್ಲಿ ಇನ್ನೆರಡು ವಾರಗಳಲ್ಲಿ ಒಂದು ಹಣ್ಣೂ ನಮ್ಮಲ್ಲಿ ಉಳಿದಿರುವುದಿಲ್ಲ. ಇನ್ನು ಬೀಜ ಸಂಗ್ರಹ ಎಲ್ಲಿಂದ? ದೊಡ್ಡ ಪ್ರಮಾಣದಲ್ಲಿ ಬೆಳೆದು ಸಂಸ್ಕರಣೆ ಮಾಡುವವರಾದರೆ ಅಂಥ ಉಪ ಉತ್ಪನ್ನಗಳನ್ನೂ ಪಡೆಯಬಹುದು. ನನಗಂತೂ ಇಷ್ಟರಲ್ಲೇ ತೃಪ್ತಿ ಇದೆ, ಸಾಕು. ■



ನಮಗಿದ್ದಂತೆ ಅವಕ್ಕೂ ಇರುತ್ತದಲ್ಲ? ಅದಕ್ಕೆ ಈ ವರ್ಷ ಅಲ್ಲಿ ಇಲ್ಲಿ ಕೆಲವು ಮರಗಳ ತುದಿಯ ಒಂದೊಂದು ಗೊಂಚಲಿಗೆ ಕವರ್ ಮತ್ತು ಬಲೆ ಹಾಕದೇ ಪಕ್ಷಿಗಳಿಗೆ, ಬಾವಲಿಗಳಿಗೆಂದೇ ಬಿಡುತ್ತಿದ್ದೇನೆ' ಎನ್ನುತ್ತ ದಿವಾಕರ್ ಕೆಲವು ಮರಗಳಲ್ಲಿ ಪೊರಕೆಯ ಬರಲುಗಳಂತೆ ಕಾಣುವ ಕಡ್ಡಿಗಳನ್ನು ತೋರಿಸುತ್ತಾರೆ. ಆಕಾಶಗಾಮಿಗಳು ದಾಳಿ ಮಾಡುವ ಮೊದಲು ಅವೆಲ್ಲ ಖರ್ಜೂರದ ಗೊನೆಗಳೇ ಆಗಿದ್ದವು.

ಇದೀಗ ಕೊಯ್ಲು ಹಬ್ಬ ನೋಡಲು ಬಂದ ನಗರವಾಸಿಗಳ ಕಲರವ ಮರಗಳ ಬಳಿ ಜೋರಾಗಿತ್ತು. ಏಣಿ ಏರುವವರ, ಕೊಯ್ಲು ಮಾಡುವವರ, ಸೆಲ್ಫಿ ಕ್ಲಿಕ್ಕಿಸುವವರ ನೂಕುನುಗ್ಗಲು. 'ನೋಡ್ರೋ, ಫೋಟೊಕ್ಕೆಂದು ಒಂದೇ ಹಣ್ಣನ್ನು ಕೊಯ್ದುಕೊಳ್ಳಿ. ಜೇಬಿಗೆ, ಚೀಲಕ್ಕೆ ತುಂಬಿಸಿಕೊಳ್ಳಬೇಡಿ ಪ್ಲೀಸ್' ಎಂದು ದಿವಾಕರ್ ಮಿತ್ರರು ಕೂಗಿದರು. ಅತ್ತ ಕೂಗಾಟ ಜಾಸ್ತಿ ಆಗುತ್ತಲೇ ಇತ್ತು. 'ಏಣಿ ಗಟ್ಟಿ ಹಿಡ್ಕೊಳ್ರೋ... ಏಯ್ ಬೇಕಂತ್ಲೇ ಅಲುಗಾಡಿಸ್ತೀಯ! ನಿನ್ ಮೇಲೇ ಬಿದ್‌ಬಿಡ್ತೀನಿ ನೋಡು...'

ಕೊಯ್ಲು ಹಬ್ಬಕ್ಕೆ ಬಂದ ಎಲ್ಲರ ಕಣ್ಣಲ್ಲೂ ತೃಪ್ತಿ ಕಾಣುತ್ತಿತ್ತು. ಮಾರಾಟದ ಕೌಂಟರಿನಲ್ಲಿ ರಿಯಾಯ್ತಿ ದರದಲ್ಲಿ ಕಿಲೊ ಗ್ರಾಮ್‌ಗೆ ರೂ. 310ರಂತೆ ಎರಡು ಮೂರು ಕಿಲೊ ಖರ್ಜೂರವನ್ನು ಖರೀದಿಸಿ ಕಾರಿಗೆ ತುಂಬುತ್ತಿದ್ದರು. ಗೆಳೆಯರಿಗೆ, ನೆಂಟರಿಗೆ, ಶಾಲೆಗೆ ಹಂಚಲೆಂದು 5–10 ಕಿಲೊ ಖರೀದಿಸುವವರೂ ಇದ್ದರು. ಕಾಲಿಗೆ ಅಂಟಿದ ಮರಳನ್ನು ಕೊಡವುತ್ತ, ಮುಂದಿನ ವರ್ಷ 'ಮರಳಿ ಮಣ್ಣಿಗೆ' ಮತ್ತೆ ಬರುತ್ತೇವೆನ್ನುತ್ತ ಕೈಬೀಸುತ್ತಿದ್ದರು.

ಪ್ರತಿಕ್ರಿಯಿಸಿ: feedback@sudha.co.in